ಸಾಕ್ಷಿಯನ್ನು ದಿ: 12.12.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಮತಿ. ಹೆಚ್.ಡಿ ವಕೀಲರಿಂದ:

ನಾನು ಶಿಕ್ಷಕ ವೃತ್ತಿ ಮಾಡುತ್ತೇನೆ. ನಾನು ಬಂಗಾರಪೇಟೆ ವಿವೇಕಾನಂದ ನಗರದಲ್ಲಿ ವಾಸ ಇರುತ್ತೇನೆ. ನನ್ನ ಮನೆ ಸಂಖ್ಯೆ 3999 ಇದ್ದು ನನ್ನ ಮನೆ 1 ನೇ ಮುಖ್ಯ ರಸ್ತೆ, 3 ನೇ ಅಡ್ಡ ರಸ್ತೆಯಲ್ಲಿ ಬರುತ್ತದೆ. ನಾನು ದಾವಾ ಸ್ವತ್ತನ್ನು ಕೆ.ಸಿ. ವೆಂಕಟಾಚಲಪತಿರವರಿಂದ ಖರೀದಿಸಿರುತ್ತೇನೆ. ನಾನು ದಾವಾ ಸ್ವತ್ತನ್ನು ಖರೀದಿಸುವ ಸಂಬಂಧ ಕೆ.ಸಿ.ವೆಂಕಟಾಚಲಪತಿರವರ ಪರಿಚಯವಾಗಿರುತ್ತದೆ, ಅದಕ್ಕೆ ಪೂರ್ವದಲ್ಲಿ ಪರಿಚಯ ಇರಲಿಲ್ಲ. ಈಗ ನ್ಯಾಯಾಲಯದ ಮುಂದಿರುವ ಮಹಿಳೆ ಶ್ರೀಮತಿ. ಸುಶೀಲಮ್ಮ ಇದ್ದು, ಅವರು ಈ ಪ್ರಕರಣದ 2 ನೇ ಪ್ರತಿವಾದಿ ಇರುತ್ತಾರೆ.

ದಾವಾ ಸ್ವತ್ತನ್ನು ದಿನಾಂಕ 07.02.2019 ರಲ್ಲಿ ಖರೀದಿಸಿರುತ್ತೇನೆ. ದಾವಾ ಸ್ವತ್ತು ಈ ಮೊದಲು 2 ನೇ ಪ್ರತಿವಾದಿಗೆ ಸೇರಿತ್ತು ಎಂದು ನಾನು ದಾವಾ ಸ್ವತ್ತನ್ನು ಖರೀದಿಸುವಾಗ ತಿಳಿದುಕೊಂಡಿದ್ದೆನು. ದಾವಾ ಸ್ವತ್ತನ್ನು ನಾನು ಕೆ.ಸಿ.ವೆಂಕಟಾಚಲಪತಿರವರಿಂದ ಮೊಬಲಗು 12 ಲಕ್ಷ ರೂಪಾಯಿಗಳಿಗೆ ಖರೀದಿಸಿರುತ್ತೇನೆ. ದಾವಾ ಸ್ವತ್ತಿನ ಸಂಬಂಧ ನ್ಯಾಯಾಲಯಗಳಲ್ಲಿ ಪ್ರಕರಣ ಬಾಕಿ ಇದ್ದ ಬಗ್ಗೆ ನಾನು ದಾವಾ ಸ್ವತ್ತನ್ನು ಖರೀದಿಸಿದಾಗ ಗೊತ್ತಿರಲಿಲ್ಲ.

ನನಗೆ 2 ನೇ ಪ್ರತಿವಾದಿ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತದೆ. 2 ನೇ ಪ್ರತಿವಾದಿರವರು ನಮ್ಮ ಮನೆಯಲ್ಲಿ ಬಾಡಿಗೆದಾರರಾಗಿ ವಾಸ ಇದ್ದರು. 2 ನೇ ಪ್ರತಿವಾದಿ ಬಾಡಿಗೆಗೆ ಇದ್ದ ನಮ್ಮ ಮನೆಯಿಂದ ದಾವಾ ಸ್ವತ್ತು ಅರ್ಧ ಕಿಲೋ ಮೀಟರ್ ಅಂತರದಲ್ಲಿ ಬರುತ್ತದೆ. ದಾವಾ ಸ್ವತ್ತಿನ ಸ್ವಾಧೀನ ನನ್ನ ಬಳಿ ಇರುತ್ತದೆ. ದಾವಾ ಸ್ವತ್ತಿನ ಸಂಬಂಧ ನಾನು

ಕಂದಾಯ ಪಾವತಿ ಮಾಡುತ್ತಿದ್ದೇನೆ. ಈ ಸಂಬಂಧ ಕಂದಾಯ ಪಾವತಿ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಮಗ ಇರುತ್ತಾರೆ. ದಾವಾ ಸ್ವತ್ತಿನ ಸಂಬಂಧ 2 ನೇ ಪ್ರತಿವಾದಿ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ತನ್ನ ಆಸ್ತಿಗೆ ಅವರು ಹೇಗೆ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನ ಖಾತೆ ಖರೀದಿ ಅನ್ವಯ ನನ್ನ ಹೆಸರಿಗೆ ಬದಲಾವಣೆಯಾಗಿರುತ್ತದೆ. ಖಾತಾ ನಂಬರ್ 38-509-371 ಆಗಿರುತ್ತದೆ, ದಾವಾ ಸ್ವತ್ತಿನ ಅಳತೆ ಪೂರ್ವ ಪಶ್ಚಿಮ 50 ಅಡಿ, ದಕ್ಷಿಣ ಉತ್ತರ 30 ಅಡಿ ಬರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಾರಾಯಣಸ್ವಾಮಿರವರ ಮನೆ, ಉತ್ತರಕ್ಕೆ ಅಮರನಾಥರವರ ಮನೆ ಮತ್ತು ದಕ್ಷಿಣಕ್ಕೆ ನಮ್ಮ ಮನೆ ಬರುತ್ತದೆ. ಸದರಿ ಮನೆಯಲ್ಲಿ ನಾನು ಈಗ ವಾಸ ಇರುತ್ತೇನೆ. ಈಗ ತೋರಿಸಿದ ಪೋಟೋದಲ್ಲಿರುವ ಮನೆ ನಾನು ವಾಸವಿರುವ ಮನೆ. ಸದರಿ ಪೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಕಾಣುವ ಹಸಿರು ಗಿಡಗಳು ಇರುವ ಜಾಗ ಈ ಪ್ರಕರಣದ ದಾವಾ ಸ್ವತ್ತು ಇರುತ್ತದೆ.

ದಾವಾ ಸ್ವತ್ತಿನ ಸಂಬಂಧ ಪ್ರಕರಣಗಳು ನ್ಯಾಯಾಲಯದಲ್ಲಿ ಚಾಲ್ತಿ ಇದ್ದ ವಿಷಯ ತಿಳಿದಿದ್ದು ಸಹ ನಾನು ದಾವಾ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸಂಬಂಧ ಪುರಸಭ ಕಾರ್ಯಾಲಯದಿಂದ 2 ನೇ ಪ್ರತಿವಾದಿಗೆ ನೋಟೀಸ್ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಋಣಭಾರ ಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ

ಋಣಭಾರ ಪತ್ರವನ್ನು ಪರಿಶೀಲಿಸಿದಾದ ಅದರಲ್ಲಿ ಕೆ.ಸಿ.ವೆಂಕಟಾಚಲಪತಿರವರ ಹೆಸರು ನಮೂದು ಇತ್ತು. 2018 ರಲ್ಲಿ ಕೆ.ಸಿ.ವೆಂಕಟಾಚಲಪತಿರವರ ಹೆಸರಿನಲ್ಲಿಯೇ ಋಣಭಾರ ಪತ್ರದಲ್ಲಿ ನಮೂದಾಗಿತ್ತು. 2018 ರಲ್ಲಿ ಬಾಲಚಂದ್ರ ಹೆಸರಿನಲ್ಲಿ ಋಣಭಾರ ಪತ್ರದಲ್ಲಿ ನಮೂದಾತಿ ಇತ್ತು ಎಂದರೆ ನನಗೆ ಗೊತ್ತಿಲ್ಲ.

<u>ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**
(ಕೇಶವಮೂರ್ತಿ.ಬಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಬಂಗಾರಪೇಟೆ